**ದಿನಾಂಕಃ 24.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:- ಎದುರುದಾರರ ಪರ ಶ್ರೀ ಎಂ.ಎಂ. ವಕೀಲರಿಂದಃ**

1) ನಾನು ಕಳೆದ 40 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ಅರ್ಜಿದಾರರು ಎಲ್ಲರೂ ಸಹ ಬೆಂಗಳೂರಿನಲ್ಲಿ ವಾಸವಿದ್ದು, ಚನ್ನಪಟ್ಟಣ ತಾಲ್ಲೂಕಿನ ಸಣಬನಹಳ್ಳಿಯಲ್ಲಿ ವಾಸವಿರುವುದಿಲ್ಲ. ಅರ್ಜಿದಾರರು ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದು ತೋರಿಸಲು ಅವರ ವಿಳಾಸಗಳನ್ನು ಅರ್ಜಿಯಲ್ಲಿ ದಾಖಲಿಸಲಾಗಿದೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಉಳಿದ ಅರ್ಜಿದಾರರು ಬೆಂಗಳೂರಿನಲ್ಲಿ ಏನು ಕೆಲಸ ಮಾಡುತ್ತಾರೆ ಎಂದು ಅರ್ಜಿಯಲ್ಲಿ ಬರೆಸಿರುವುದಿಲ್ಲ.

2) ಅಸಲು ದಾವಾ ಸಂಖ್ಯೆ 28/2020 ರ ಪ್ರಕರಣದಲ್ಲಿ ಸಲ್ಲಿಸಿರುವ ವಾದಿಗಳ ವಿಳಾಸವನ್ನೇ ಈ ಪ್ರಕರಣದಲ್ಲಿ ಸಲ್ಲಸಲಾಗಿದೆ ಎಂದರೆ ಸರಿ. 7ನೇ ಅರ್ಜಿದಾರ ರಾಜು ರವರು ಮೃತಪಟ್ಟಿದ್ದು ಆತನಿಗೆ ಹೆಂಡತಿ ಮತ್ತು ಇಬ್ಬರು ಮಕ್ಕಳು ಇರುತ್ತಾರೆ. ಆತನ ಹೆಂಡತಿ ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅಸಲು ದಾವಾ ಸಂಖ್ಯೆ 28/2020 ರ ಪ್ರಕರಣವನ್ನು ನಿಖಿಲ್ ಎಂಬ ವಕೀಲರು ನಡೆಸುತ್ತಿದ್ದರು. ಸದರಿ ವಕೀಲರ ದೂರವಾಣಿ ಸಂಖ್ಯೆ ನಮ್ಮ ಬಳಿ ಇತ್ತು. ಸದರಿ ಪ್ರಕರಣದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ ಅರ್ಜಿ ವಜಾ ಆಗಿತ್ತು ಎಂಬ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ. ಆ ಬಗ್ಗೆ ನಮ್ಮ ವಕೀಲರು ನಮಗೆ ಮಾಹಿತಿ ನೀಡಿರಲಿಲ್ಲ. ನಾನು ಪ್ರಕರಣ ಹಾಕಿದ ದಿನದಿಂದ ವಜಾ ಆಗುವವರೆಗೆ ಪ್ರತಿ ಬಾರಿ ವಕೀಲರಿಗೆ ದೂರವಾಣಿ ಕರೆ ಮೂಲಕ ಪ್ರಕರಣದ ಹಾಗು ಹೋಗುಗಳನ್ನು ವಿಚಾರ ಮಾಡುತ್ತಿರಲಿಲ್ಲ. ಪ್ರಕರಣದ ವಿದ್ಯಮಾನವನ್ನು ವಕೀಲರ ಕಚೇರಿಗೆ ನಾನಾಗಲೀ ಉಳಿದ ಅರ್ಜಿದಾರರಾಗಲೀ ಭೇಟಿ ಕೊಟ್ಟು ತಿಳಿದುಕೊಳ್ಳಲು ತೊಂದರೆ ಇರಲಿಲ್ಲ. ಯಾವ ದಿನಾಂಕದಂದು ವಜಾ ಆಗಿದೆ ಎಂದು ನನಗೆ ಗೊತ್ತಿಲ್ಲ ಆದರೆ ಗ್ರಾಮಸ್ಥರು ವಜಾ ಆಗಿರುವುದಾಗಿ ಮಾತನಾಡುತ್ತಿದ್ದಾಗ ನಮಗೆ ಆ ಬಗ್ಗೆ ತಿಳಿಯಿತು.

3) ಅರ್ಜಿದಾರರ ಪೈಕಿ 3 ರಿಂದ 4 ಜನರನ್ನು ಹೊರತುಪಡಿಸಿ ಉಳಿದ ಎಲ್ಲರೂ ಆರೋಗ್ಯವಾಗಿ ಇರುತ್ತಾರೆ. ಅರ್ಜಿದಾರರ ಪೈಕಿ 3 ರಿಂದ 4 ಜನರ ಆರೋಗ್ಯ ಪರಿಸ್ಥಿತಿ ಸರಿ

ಇಲ್ಲ ಎಂದು ತೋರಿಸುವ ಸಂಬಂಧ ನಾನು 2ನೇ ಅರ್ಜಿದಾರರ ವೈದ್ಯಕೀಯ ದಾಖಲೆಯನ್ನು ಮಾತ್ರ ಹಾಜರಪಡಿಸಿದ್ದು ಉಳಿದವರ ವೈದ್ಯಕೀಯ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 2ನೇ ಅರ್ಜಿದಾರ ಬೆಂಗಳೂರಿನ ದೀಪಾಂಜಲಿ ನಗರದಲ್ಲಿ ವಾಸವಿರುತ್ತಾರೆ. ಹಬ್ಬ ಹರಿದಿನಗಳಿಗೆ ಅವರು ಚನ್ನಪಟ್ಟಣಕ್ಕೆ ಬರುತ್ತಾರೆ. ದೀಪಾಂಜಲಿ ನಗರದಲ್ಲಿ ಆಸ್ಪತ್ರೆಗಳು ಇವೆ ಎಂದರೆ ಸರಿ. 2ನೇ ಅರ್ಜಿದಾರರಿಗೆ ಕಿಡ್ನಿಯಲ್ಲಿ ಕಲ್ಲು ಇದ್ದು ನೋವು ಅನುಭವಿಸುತ್ತಿದ್ದರು. ಆ ಬಗ್ಗೆ ಅವರು ಚಾಮರಾಜಪೇಟೆಯ ವೈದ್ಯರ ಬಳಿ ಚಿಕಿತ್ಸೆ ಪಡೆದಿರುತ್ತಾರೆ. ಪ್ರಸ್ತುತ ಅವರು ಆರೋಗ್ಯವಾಗಿ ಇರುತ್ತಾರೆ. ನ್ಯಾಯಾಲಯಕ್ಕೆ ಆತ ಹಾಜರಾಗಿ ಸಾಕ್ಷ್ಯನುಡಿಯಲು ತೊಂದರೆ ಇಲ್ಲ. ಉಳಿದ ಅರ್ಜಿದಾರರು ತಮ್ಮ ಪ್ರಕರಣದ ಕುರಿತು ವಕೀಲರಿಗೆ ಕರೆ ಮಾಡಿ ವಿಚಾರ ತಿಳಿದುಕೊಳ್ಳಬಹುದಿತ್ತು ಎಂದರೆ ಸಾಕ್ಷಿಯು ಅವರಿಗೆ ಅಷ್ಟು ತಿಳುವಳಿಕೆ ಇರುವುದಿಲ್ಲ ಎಂದು ನುಡಿಯುತ್ತಾರೆ.

5) ಅರ್ಜಿದಾರರೆಲ್ಲರೂ ಮೊದಲಿಗೆ ಅಸಲು ದಾವಾ ಸಂಖ್ಯೆ 28/2020 ರ ಪ್ರಕರಣದಲ್ಲಿ ಒಟ್ಟಿಗೆ ಹಾಜರಾಗುತ್ತಿದ್ದರು ಎಂದರೆ ಸರಿಯಲ್ಲ. ನಿಪಿ.4 ರ ದಾಖಲೆಯನ್ನು 2ನೇ ಅರ್ಜಿದಾರರು ನನಗೆ ನೀಡಿದ್ದರು. ದಿಃ 19.02.2022 ರಂದು ಮಧ್ಯಂತರ ಅರ್ಜಿ ವಜಾ ಆದ ದಿನ ನಾವು ಎಲ್ಲ ವಾದಿಗಳು ಹಾಗೂ ನಮ್ಮ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದೆವು ಎಂದರೆ ಸರಿಯಲ್ಲ. ನಮ್ಮ ವಕೀಲರು ಪ್ರತಿ ಬಾರಿ ಪ್ರಕರಣದ ವಿದ್ಯಮಾನವನ್ನು ನಮಗೆ ತಿಳಿಸುತ್ತಿದ್ದರು ಎಂದರೆ ಸರಿಯಲ್ಲ. ವಕೀಲರು ಪ್ರಕರಣ ನಡೆಸಲು ಮಾಹಿತಿಗಳನ್ನು ನನಗೆ ಕೇಳಿದ್ದರೂ ಸಹ ನಾವು ಉದ್ದೇಶಪೂರ್ಕವಾಗಿ ಆ ಬಗ್ಗೆ ಅವರಿಗೆ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ಸಾಕ್ಷ್ಯ ನುಡಿಯುವಂತೆ ನಮಗೆ ನ್ಯಾಯಾಲಯದಲ್ಲಿ ಸಾಕಷ್ಟು ಬಾರಿ ಅವಕಾಶ ನೀಡಿದ್ದರೂ ಸಹ ನಾವು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ವಜಾ ಆಗಿದೆ ಎಂದರೆ ಸರಿಯಲ್ಲ. 2ನೇ ಅರ್ಜಿದಾರ ಮತ್ತು ನನ್ನನ್ನು ಹೊರತುಪಡಿಸಿ ಉಳಿದವರು ಕೆಲಸದಲ್ಲಿ ಸಮಸ್ಯೆ ಇರುವ ಕಾರಣ ಅವರು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ. ಎದುರುದಾರನಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.4 ರ ದಾಖಲೆ ವೈದ್ಯರ ಬಳಿ ಶಾಮೀಲಾಗಿ ಪಡೆದಿರುತ್ತೇವೆ ಎಂದರೆ ಸಾಕ್ಷಿಯು ಆ ಬಗ್ಗೆ ತನಗೆ ಗೊತ್ತಿಲ್ಲ ಅದನ್ನು 2ನೇ ಅರ್ಜಿದಾರರು ತನಗೆ ನೀಡಿದರು ಎಂದು ನುಡಿಯುತ್ತಾರೆ. ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹ ಹಿಂದಿನ ವಕೀಲರ ಮೇಲೆ ಆಪಾದನೆ ಮಾಡಿ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಉಳಿದ ಅರ್ಜಿದಾರರು ಬಂದಲ್ಲಿ ಸತ್ಯಾಂಶ

ಹೊರಬರುತ್ತದೆ ಎಂಬ ಕಾರಣಕ್ಕಾಗಿ ಅವರನ್ನು ನ್ಯಾಯಾಲಯಕ್ಕೆ ಕರೆಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**